ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951
IS / ISO 9001 : 2008 BUREAU OF INDIAN STANDARDS QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./ MD/GM-[C-I] 37/2017-18

ದಿನಾಂಕ :
Date 28/09/2017

**CIRCULAR NO.927 (A)**

| | |
|---|---|
| **Sub:** | **Interest Subsidy Scheme for Women Entrepreneurs.** |
| **Ref:** | 1.GO No.ಮಮಇ 64 ಮಅನಿ 2014 ದಿನಾಂಕ 10-12-2015 |
| | 2.GO No.ಮಮಇ 50 ಮಅನಿ 2017 ದಿನಾಂಕ 12-05-2017 |
| | 3.GO No.ಮಮಇ 50 ಮಅನಿ 2017 ದಿನಾಂಕ 23-09-2017 |
| | 4.Circular No.927 dated 5th August 2017 |
| | 5.ION KSFC/HO/ED-I/892/2017-18/C-3040 dated 29-08-2017. |

The Interest Subsidy Scheme for Women Entrepreneurs for loans up to Rs.50.00 lakhs was originally implemented based on the Government Order referred under reference 1 above. The limits of loan eligible for interest subsidy component was enhanced to Rs.200.00 lakhs vide GO referred 2 above. The circular under reference 4 was issued along with the Government Order. The branches were advised to sanction the loans under the Interest Subsidy Scheme within the limit fixed for each branch. One of the conditions imposed in the GO was that the Corporation should obtain prior approval from the Government of Karnataka before sanction of the loans.

Considering the operational difficulties, the matter was taken-up with the Government of Karnataka for modification of the GO to dispense with the condition regarding prior approval of the Government. The Government has issued Modification Order to the GO under reference No.2 above and has dispensed with the prior approval of the Government and clearance of the District Level Screening Committee. Copy of the Modification Order is enclosed to this Circular.

Further, an ION was issued regarding the applicability of subsidy for loans of different slabs in view of the limited budget allocation vide ION under reference No.5.

The Branches are hereby instructed to accept and process the loan applications under the Interest Subsidy Scheme for Women Entrepreneurs keeping in view, the norms laid down in the Government Order and the Lending Policy and also the guidelines given under ION referred above.

**MANAGING DIRECTOR**

To:
All the BMs/AGMs/DGMs of Branch Offices
All the AGMs of Audit Cells
All the Department Heads in HO
EA to MD, Library
General Managers
Executive Director –I &II

## ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 50 ಮಅನಿ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿಗಳ ಕಟ್ಟಡ, 3ನೇ ಗೇಟ್ ನೆಲ ಮಹಡಿ,
ಬೆಂಗಳೂರು, ದಿನಾಂಕ:23.09.2017

## ಸೇರ್ಪಡೆ ಆದೇಶ

ವಿಷಯ: ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಮಹಿಳಾ ಉದ್ಯಮಿಗಳಿಗೆ ಕೆ.ಎಸ್.ಎಫ್.ಸಿ. ಮುಖಾಂತರ ನೀಡುವ ಬಡ್ಡಿ ಸಹಾಯಧನ ಯೋಜನೆಯ ಮಾರ್ಗಸೂಚಿಯ ತಿದ್ದುಪಡಿ/ಬದಲಾವಣೆ ಆದೇಶದ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಮಮಇ 64 ಮಅನಿ 2015, ದಿ:10.02.2015
2. ಸರ್ಕಾರದ ಆದೇಶ ಸಂಖ್ಯೆ:ಮಮಇ 50 ಮಅನಿ 2017, ದಿ:12.05.2017 (ಪರಿಷ್ಕೃತ)
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆರವರ ಪತ್ರ ಸಂಖ್ಯೆ:MD/DGM(C)/41/2017-18, ದಿ:11.08.2017
4. ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆರವರ ಪತ್ರ ಸಂಖ್ಯೆ:ED-I/DGM(C)HD/49, ದಿ:05.09.2017
5. ಆರ್ಥಿಕ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ:FD/ACS/17547/2017, ದಿ:13.09.2017

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಮಹಿಳಾ ಉದ್ಯಮಿಗಳಿಗೆ ಕೆ.ಎಸ್.ಎಫ್.ಸಿ. ಮುಖಾಂತರ ನೀಡುವ ಬಡ್ಡಿ ಸಹಾಯಧನ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳಿಗೆ ಸಂಬಂಧಿಸಿದಂತೆ ಉಲ್ಲೇಖ (2)ರ ಆದೇಶದಲ್ಲಿ ಉಲ್ಲೇಖಿಸಲಾಗಿರುವ ಇತರೆ ನಿಬಂಧನೆಗಳಲ್ಲಿನ ಕ್ರ.ಸಂ.(1)ಕ್ಕೆ **ಸೇವಾ ಚಟುವಟಿಕೆಗಳು/ ಸೇವಾ ಘಟಕಗಳು** ಎಂಬುದನ್ನು ಸೇರ್ಪಡೆಗೊಳಿಸಿದಲ್ಲಿ ಅತಿ ಸಣ್ಣ / ಸಣ್ಣ / ಮಧ್ಯಮ ಗಾತ್ರದ ಕೈಗಾರಿಕೆಗಳನ್ನು ಪ್ರಾರಂಭಿಸುವ ಉತ್ಸಾಹಿ ಮಹಿಳಾ ಉದ್ಯಮಿಗಳಿಗೆ ಉತ್ತೇಜನ ನೀಡಿದಂತಾಗುತ್ತದೆಯೆಂದು ಹಾಗೂ ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ಯಮಿಗಳಿಗಾಗಿ ಜಾರಿಗೆ ತಂದಿರುವ ಯೋಜನೆಯಲ್ಲಿರುವಂತೆಯೇ ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಮುಂಗಡವಾಗಿ ಪಾವತಿ/ಠೇವಣಿ ಇಡುವ ಬಗ್ಗೆ ಪರಿಗಣಿಸಿ ಮಾರ್ಗಸೂಚಿಯಲ್ಲಿನ ಕ್ರ.ಸಂ.(6)ರ ನಿಬಂಧನೆಗೆ ಸೂಕ್ತ ಮಾರ್ಪಾಡು ಮಾಡುವಂತೆ ಮತ್ತು ಸಾಲ ಮಂಜೂರಿಗಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯ ಕುರಿತ ನಿಬಂಧನೆ (5)ನ್ನು ಹಿಂಪಡೆಯುವಂತೆ ಉಲ್ಲೇಖ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆರವರು, ಉಲ್ಲೇಖ(4)ರ ಪತ್ರದಲ್ಲಿ ಉಲ್ಲೇಖ (3)ರ ಪತ್ರವನ್ನುದ್ದೇಶಿಸಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆರವರು ಹಾಗೂ ಉಲ್ಲೇಖ (5)ರ ಅನಧಿಕೃತ ಟಿಪ್ಪಣಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆರವರು ಕೋರಿದನ್ವಯ ಈ ಮುಂದಿನಂತೆ ಸೇರಿಸಿ/ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು:

1. **"ಅರ್ಹತೆ :**

(ii) ಹಾಲಿ ಕಾರ್ಯನಿರ್ವಹಿಸುತ್ತಿರುವ ಅತಿ ಸಣ್ಣ / ಸಣ್ಣ / ಮಧ್ಯಮ ಕೈಗಾರಿಕೆಗಳ ಉದ್ದಿಮೆದಾರರು ತಮ್ಮ ಘಟಕವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ / ಅಧುನೀಕರಣಗೊಳಿಸುವ ಸಲುವಾಗಿ." **ಎಂಬುದರ ಬದಲಾಗಿ**

1. **"ಅರ್ಹತೆ :**

(ii) ಹಾಲಿ ಕಾರ್ಯನಿರ್ವಹಿಸುತ್ತಿರುವ ಅತಿ ಸಣ್ಣ / ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಉದ್ದಿಮೆದಾರರು ತಮ್ಮ ಘಟಕವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ / ಅಧುನೀಕರಣಗೊಳಿಸುವ ಸಲುವಾಗಿ." ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

"ಇತರೆ ನಿಬಂಧನೆಗಳು:

(1) ಈ ಬಡ್ಡಿ ಸಹಾಯಧನವು ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ವರ್ಗದ ಉದ್ದಿಮೆದಾರರಿಗೆ ನೀಡುವ ಅವಧಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. ಇತರೆ ಚಟುವಟಿಕೆಗಳು ಅಂದರೆ, ಕಟ್ಟಡ ನಿರ್ಮಾಣ, ಸಾರಿಗೆ ವಾಹನಗಳ ಖರೀದಿಗೆ ಈ ಯೋಜನೆಯಲ್ಲಿ ಅನ್ವಯವಾಗುವುದಿಲ್ಲ." **ಎಂಬುದರ ಬದಲಾಗಿ**

"ಇತರೆ ನಿಬಂಧನೆಗಳು:

ಈ ಬಡ್ಡಿ ಸಹಾಯಧನವು ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ವರ್ಗದ ಉದ್ದಿಮೆದಾರರಿಗೆ ಹಾಗೂ ಸೇವಾ ಘಟಕಕ್ಕೆ ನೀಡುವ ಅವಧಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. ಇತರೆ ಚಟುವಟಿಕೆಗಳು ಅಂದರೆ, ಕಟ್ಟಡ ನಿರ್ಮಾಣ, ಸಾರಿಗೆ ವಾಹನಗಳ ಖರೀದಿಗೆ ಈ ಯೋಜನೆಯಲ್ಲಿ ಅನ್ವಯವಾಗುವುದಿಲ್ಲ." **ಎಂದು ತಿದ್ದಿ ಓದಿಕೊಳ್ಳತಕ್ಕದ್ದು.**

"(5) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ನೀಡುವ ಬಡ್ಡಿ ಸಹಾಯಧನ ಯೋಜನೆ ಅಡಿಯಲ್ಲಿ ಕ.ರಾ.ಹ.ಸಂಸ್ಥೆಯವರು ಜಿಲ್ಲಾ ಮಟ್ಟದಲ್ಲಿ ಮಹಿಳಾ ಉದ್ದಿಮೆದಾರರನ್ನು ಆಯ್ಕೆ ಮಾಡುವಾಗ ಕ.ರಾ.ಹ.ಸಂಸ್ಥೆಯ ಶಾಖಾ ವ್ಯವಸ್ಥಾಪಕರ ಅಧ್ಯಕ್ಷತೆಯ ಸಮಿತಿಯಲ್ಲಿ ಆಯಾ ಜಿಲ್ಲೆಯ ಲೀಡ್ ಬ್ಯಾಂಕಿನ ವ್ಯವಸ್ಥಾಪಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಮ.ಮ.ಅ.ಇ., ಹಾಗೂ ಕ.ರಾ.ಮ.ಅ.ನಿಗಮದ ಅಭಿವೃದ್ಧಿ ನಿರೀಕ್ಷಕರು ಆಯ್ಕೆ ಸಮಿತಿಯ ಸದಸ್ಯರಾಗಿರತಕ್ಕದ್ದು. ಸಮಿತಿ ನಿಯಮಾನುಸಾರ ನಿಗದಿತ ಮಾನದಂಡಗಳನ್ನು ಪೂರೈಸಿದ ಹಾಗೂ Security/Guaranteeಯನ್ನು ಖಾತ್ರಿಪಡಿಸಿಕೊಂಡು ಆಯ್ಕೆ ಮಾಡಿದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ಮಂಜೂರಾತಿ/ಅನುಮೋದನೆ ಪಡೆಯತಕ್ಕದ್ದು. ಫಲಾನುಭವಿಯು ಯಾವುದೇ ರೀತಿಯಲ್ಲಿ ನಷ್ಟ ಹೊಂದಿದಲ್ಲಿ ಅಥವಾ ಸಾಲ ಮರುಪಾವತಿಸದಿದ್ದಲ್ಲಿ ಸರ್ಕಾರ ಅಥವಾ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಹೊಣೆಯಾಗುವುದಿಲ್ಲ / ಜವಾಬ್ದಾರರಲ್ಲ." **ಎಂಬುದರ ಬದಲಾಗಿ**

"ಫಲಾನುಭವಿಯು ಯಾವುದೇ ರೀತಿಯಲ್ಲಿ ನಷ್ಟ ಹೊಂದಿದಲ್ಲಿ ಅಥವಾ ಸಾಲ ಮರುಪಾವತಿಸದಿದ್ದಲ್ಲಿ ಸರ್ಕಾರ ಅಥವಾ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಹೊಣೆಯಾಗುವುದಿಲ್ಲ / ಜವಾಬ್ದಾರರಲ್ಲ." **ಎಂದು ತಿದ್ದಿ ಓದಿಕೊಳ್ಳತಕ್ಕದ್ದು.**

"(6) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ಅವಧಿ ಸಾಲ ಮಂಜೂರಾದ ಮಹಿಳಾ ಉದ್ದಿಮೆದಾರರಿಗೆ ಸಾಲ ಬಿಡುಗಡೆಯಾದ ನಂತರ ಇವರ ಪಟ್ಟಿಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಕಳುಹಿಸಿ ಬಡ್ಡಿ ಸಹಾಯಧನದ ಬಿಡುಗಡೆಗೆ ಕೋರಿಕೆ ಪತ್ರ ಸಲ್ಲಿಸಿದ ನಂತರ ಹಣ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ. ಪರಿಷ್ಕೃತ ಆದೇಶದನ್ವಯ ಸಾಲದ ಗಾತ್ರವು ರೂ.5.00ಲಕ್ಷಗಳಿಂದ ಗರಿಷ್ಠ ರೂ.2.00 ಕೋಟಿಗಳವರೆಗೆ ದಿನಾಂಕ: 12.05.2017ರ ನಂತರ ಮಂಜೂರಾದ ಸಾಲಗಳಿಗೆ ಅನ್ವಯವಾಗುತ್ತದೆ." **ಎಂಬುದರ ಬದಲಾಗಿ**

"(6) ಕನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ಅವಧಿ ಸಾಲ ಮಂಜೂರಾದ ಮಹಿಳಾ ಉದ್ದಿಮೆದಾರರಿಗೆ ಸಾಲ ಬಿಡುಗಡೆ ಮಾಡುವ ಮುನ್ನ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಬಡ್ಡಿ ಸಹಾಯಧನದ ಹಣವನ್ನು ಮುಂಗಡವಾಗಿ ಠೇವಣಿ ಇಡಲಾಗುವುದು **ಎಂದು ತಿದ್ದಿ ಓದಿಕೊಳ್ಳತಕ್ಕದ್ದು.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

22/9/17

(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

23/9/17

<u>ಇವರಿಗೆ:</u>

1. ಮಹಾಲೇಖಪಾಲರು, (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.

2. ಮಹಾಲೇಖಪಾಲರು, (ಇಆರ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
3. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ-1, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂ
14. ಶಾಖಾ ರಕ್ಷಾ ಕಡತ/ಒ.ಡಿ.ಜಿ.ಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.